

'ನಾನು ಸಿನಿಮಾಕ್ಷೇತ್ರಕ್ಕೆ ಬರುತ್ತೇನೆ ಅಂದುಕೊಂಡಿದ್ದವಳೇ ಅಲ್ಲ. ಬಂದ ಮೇಲೆ ಸಿಕ್ಕ ಅವಕಾಶಗಳು ಚೆನ್ನಾಗಿಯೇ ಇದ್ದವು. ಆದರೆ ನಾನು ನಿರೀಕ್ಷಿಸಿದ ರೀತಿ ಆಗಲಿಲ್ಲ. ಆಗ ನಟನಾಧಾರಿತ ಪಾತ್ರಗಳು ಅಷ್ಟಿರಲಿಲ್ಲ. ನಂತರ ತೆಲುಗು ಚಿತ್ರರಂಗದಲ್ಲೂ ಕಾಣಿಸಿಕೊಂಡೆ. ಈಗ ಪರಿಸ್ಥಿತಿ ಬದಲಾಗಿದೆ. ಒಟಿಟಿ ಬಂದ ಮೇಲೆ ಬಹಳ ಬದಲಾವಣೆಯಾಗುತ್ತಿದೆ' ಎನ್ನುತ್ತಾರೆ.

'ಮೊದಲನೆಯದಾಗಿ, ಕನ್ನಡ ಚಿತ್ರರಂಗದಲ್ಲಿ 'ಗ್ಲಾಮ್ ಡಾಲ್' ಪರಿಕಲ್ಪನೆ ಬದಲಾಗಿದೆ. ಪರ್ಫಾರ್ಮೆನ್ಸ್ ಓರಿಯೆಂಟೆಡ್ ಪಾತ್ರಗಳಿಗೆ ಮನ್ನಣೆ ಸಿಗುತ್ತಿದೆ. ನಮ್ಮ ಕನ್ನಡದ ನಟಿಯರಿಗೆ ಅವಕಾಶಗಳು ಹೆಚ್ಚಾಗಿವೆ. ಕನ್ನಡ ಸಿನಿಮಾ ಕ್ಷೇತ್ರ ಬೇರೆಯದೇ ಮಟ್ಟಕ್ಕೆ ಹೋಗಿದೆ. ಹೀರೊ ಹೀರೋಯಿನ್ ಪರಿಕಲ್ಪನೆ ಹೋಗಿ 'ಪರ್ಫಾರ್ಮರ್ಸ್' ಎಂಬ ಪರಿಕಲ್ಪನೆ ಬಂದಿದೆ' ಎಂದು ವಿವರಿಸುತ್ತಾರೆ ಸುಕೃತಾ.

ಸಿನಿಮಾರಂಗದಲ್ಲಿ ಹೆಣ್ಣುಮಕ್ಕಳ 'ಶೆಲ್ಫ್ ಲೈಫ್' ಕೂಡ ಬದಲಾವಣೆ ಕಂಡಿದೆ ಎನ್ನುವುದು ಅವರ ಅಭಿಪ್ರಾಯ.

'ಸಿನಿಮಾಗಳಲ್ಲಿ ನಟಿಯರಿಗೆ ಶೆಲ್ಫ್ ಲೈಫ್ ಎಂಬಂತೆ ಇತ್ತು. ನಮ್ಮನ್ನು ಉತ್ಪನ್ನದ ರೀತಿಯೇ ಪರಿಗಣಿಸುತ್ತಿದ್ದರು. ಹೆಣ್ಣುಮಕ್ಕಳಿಗೆ ಸಿನಿಮಾ ಎಂದರೆ ಐದಾರು ವರ್ಷ ಅಷ್ಟೆ. ಅದಕ್ಕಿಂತ ಜಾಸ್ತಿ ಇದ್ದರೆ ಅವರು ಸೂಪರ್ ಸ್ಟಾರ್ ಎನಿಸಿಕೊಳ್ಳುತ್ತಿದ್ದರು. ಆ ಒಂದು ಪರಿಕಲ್ಪನೆ ಈಗ ಸಂಪೂರ್ಣ ಬದಲಾಗಿದೆ. ಈಗ 'ಪಕ್ವ ನಟಿ' ಎಂದು ಗುರುತಿಸುತ್ತಾರೆ. ಮಕ್ಕಳಾಗಿರುವ ನಟಿಯರು ಕೂಡ ಸಿನಿಮಾಗಳಲ್ಲಿ ತಮ್ಮದೇ ರೀತಿಯಲ್ಲಿ ಮಿಂಚುತ್ತಿದ್ದಾರೆ. ಒಳ್ಳೊಳ್ಳೆಯ ಪರಿಕಲ್ಪನೆಗಳ ಸಿನಿಮಾಗಳು ಅವರಿಗೆಂದೇ ಮೂಡಿಬರುತ್ತಿವೆ. 16–30ರ ವಯೋಮಾನದ ಸ್ಲ್ಯಾಬ್ ಹೋಗಿ ಮಹಿಳೆಯರಿಗೆ ಸಿನಿಮಾರಂಗ ಪೂರ್ಣ ತೆರೆದುಕೊಂಡಿದೆ' ಎಂದು ಸಂತಸದಿಂದ ಹೇಳುತ್ತಾರೆ ಅವರು.

ಈ ಎಲ್ಲದಕ್ಕೂ ಒಟಿಟಿ ಸಂಸ್ಕೃತಿ ಬೆನ್ನಿಗಿದೆ ಎನ್ನುವುದು ಅವರ ಅನಿಸಿಕೆ.

'ಸಿನಿಮಾ ಕ್ಷೇತ್ರದಲ್ಲಿ ಕೆಲ ಕಲಾವಿದರಿಗೆ ಮೊದಲ ಇನ್ನಿಂಗ್ಸ್ ಚೆನ್ನಾಗಿಲ್ಲದಿದ್ದರೂ ವಾಪಸ್ ಬಂದು ಎರಡನೇ ಇನ್ನಿಂಗ್ಸ್‌ನಲ್ಲಿ ಒಳ್ಳೊಳ್ಳೆಯ ಅವಕಾಶಗಳು ಸಿಕ್ಕಿರುವ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ನಟನೆಯಲ್ಲಿ ಪ್ಯಾಷನೇಟ್ ಆಗಿದ್ದರೆ ಖಂಡಿತ ಅವರು ಬಯಸುವುದು ಸಿಗುತ್ತದೆ. ಅವರ ಗ್ರಾಫ್ ಬೇರೆಯದೇ ರೀತಿ ಆಗುತ್ತದೆ. ನನಗೂ ಅಂಥದ್ದೊಂದು ನಿರೀಕ್ಷೆಯಿದೆ' ಎಂದು ಹೇಳುತ್ತಾರೆ.

ಸದ್ಯ ತೆಲುಗಿನ ಮತ್ತೊಂದು ವೆಬ್‌ಸೀರೀಸ್ ಹಾಗೂ ಕನ್ನಡದ ಸಿನಿಮಾವೊಂದು ಮಾತುಕತೆಯಲ್ಲಿದ್ದು, ತಮ್ಮನ್ನು ತರಹೇವಾರಿ ಪಾತ್ರಗಳಲ್ಲಿ ತೊಡಗಿಸಿಕೊಳ್ಳುವ ಮನಸ್ಸು ಸುಕೃತಾ ಅವರದ್ದು. ■

# ಮಲೆಯಾಳಂ ಬೆಡಗಿಗೆ ಕನ್ನಡದೊಲವು



ಮಲೆಯಾಳಂ, ತೆಲುಗು ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ನಟಿ ಸೌಮ್ಯಾ ಮೆನನ್, ಇದೀಗ 'ಹಂಟರ್' ಸಿನಿಮಾ ಮೂಲಕ ಕನ್ನಡ ಚಿತ್ರರಂಗಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ಕನ್ನಡ ಕಲಿಯುತ್ತಿದ್ದಾರೆ ಕೂಡ.

ನಿರಂಜನ್ ಸುಧೀಂದ್ರ ನಾಯಕ ನಟನಾಗಿರುವ ಹಂಟರ್ ಸಿನಿಮಾದಲ್ಲಿ ಸೌಮ್ಯಾ ಮೆನನ್ ಮಿಂಚುತ್ತಿದ್ದಾರೆ. ಮಹಿಳಾ ಸಬಲೀಕರಣ, ಸೌಮ್ಯಾ ಅವರನ್ನು ಈ ಸಿನಿಮಾದೆಡೆಗೆ ಸೆಳೆದ ಅಂಶವಂತೆ. ಇದರ ಹೊರತಾಗಿ ಸಿನಿಮಾದಲ್ಲಿನ ರೊಮ್ಯಾಂಟಿಕ್, ಆ್ಯಕ್ಷನ್–ಥ್ರಿಲ್ಲರ್ ಅಂಶವೂ ಆಕರ್ಷಕವಾಗಿದೆ ಎಂದು ಹೇಳಿದ್ದಾರೆ.

ಕನ್ನಡ ಭಾಷೆ ಸೌಮ್ಯಾ ಅವರಿಗೆ ಬಲು ಇಷ್ಟವಂತೆ. 'ಶೂಟಿಂಗ್ ಸಮಯದಲ್ಲಿ ಕೆಲವು ಕನ್ನಡ ಪದಗಳನ್ನು ಕಲಿತುಕೊಂಡಿದ್ದೇನೆ. ಭಾಷೆಯನ್ನು ಇನ್ನಷ್ಟು ಕಲಿಯಲು ನನಗೆ ತುಂಬಾ ಇಷ್ಟ' ಎಂದು ಹೇಳಿಕೊಂಡಿದ್ದಾರೆ. ಜೊತೆಗೆ, 'ಈ ಚಿತ್ರದಲ್ಲಿ ನನ್ನದು ಬಬ್ಲಿ ಹುಡುಗಿ ಪಾತ್ರ. ಆದರೆ ಸೆಕೆಂಡ್ ಹಾಫ್‌ನಲ್ಲಿ ಪಾತ್ರ ಗಂಭೀರವಾಗುತ್ತಾ ಸಾಗುತ್ತದೆ' ಎಂದು ವಿವರಿಸಿದ್ದಾರೆ.

ಕನ್ನಡದಲ್ಲಿ ಅವರ ಮೊದಲ ಸಿನಿಮಾ ಬಿಡುಗಡೆಗೆ ಮುನ್ನವೇ ಎರಡನೇ ಸಿನಿಮಾಗೂ ಸಹಿ ಹಾಕಿದ್ದಾರೆ. ಬೇರೆ ಬೇರೆ ಸಿನಿಮಾ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವ ಅವರು, 'ಭಾಷೆ ಬೇರೆ ಬೇರೆಯಾದರೂ ಸಿನಿಮಾ ಮಾಧ್ಯಮ ಒಂದೇ. ಇಲ್ಲಿನ ತಂಡದೊಂದಿಗೆ ಕೆಲಸ ಮಾಡುತ್ತಿರುವುದು ವಿಶೇಷ ಅನುಭವ' ಎಂದು ಸಂತೋಷ ವ್ಯಕ್ತಪಡಿಸಿದ್ದಾರೆ. ■

# ಹೊಸ ಕನಸಿನ ಫೈರ್ ಫ್ಲೈ



ಈಗಾಗಲೇ ಮೂರು ವೆಬ್ ಸರಣಿಗಳನ್ನು ನಿರ್ಮಾಣ ಮಾಡಿರುವ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಅವರ ಪುತ್ರಿ ನಿವೇದಿತಾ ಶಿವರಾಜ್‌ಕುಮಾರ್, ಇದೀಗ ಸಿನಿಮಾ ನಿರ್ಮಾಣದ ಮುಖಾಂತರ ಚಂದನವನಕ್ಕೆ ಕಾಲಿಟ್ಟಿದ್ದಾರೆ.

ಹೊಸ ಪ್ರತಿಭೆಗಳಿಗೆ ಅವಕಾಶ ನೀಡಲೆಂದು ಆರಂಭಿಸಿರುವ 'ಶ್ರೀ ಮುತ್ತು ಸಿನಿ ಸರ್ವೀಸ್' ಬ್ಯಾನರಿನಡಿ ನಿವೇದಿತಾ ಚೊಚ್ಚಲ ಸಿನಿಮಾ ಸೆಟ್ಟೇರಿದೆ. ಬೆಂಗಳೂರಿನ ಕಾಡು ಮಲ್ಲೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಚಿತ್ರದ ಮುಹೂರ್ತ ನಡೆದಿದೆ.

'ಫೈರ್ ಫ್ಲೈ': ನಿವೇದಿತಾ ಅವರ ನಿರ್ಮಾಣದ ಮೊದಲ ಚಿತ್ರಕ್ಕೆ 'ಫೈರ್ ಫ್ಲೈ' ಎಂಬ ಶೀರ್ಷಿಕೆ ಇಡಲಾಗಿದೆ. ಚಿತ್ರಕ್ಕೆ ವಂಶಿ ಅವರು ಆ್ಯಕ್ಷನ್ ಕಟ್ ಹೇಳಲಿದ್ದು, ನಾಯಕನ ಪಾತ್ರಕ್ಕೂ ಬಣ್ಣ ಹಚ್ಚಲಿದ್ದಾರೆ. 'ಪಿಆರ್‌ಕೆ ಪ್ರೊಡಕ್ಷನ್ಸ್' ನಿರ್ಮಾಣದ 'ಮಾಯಾಬಜಾರ್' ಸಿನಿಮಾದಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದ ಅವರು, ಇತ್ತೀಚೆಗೆ ಬಂದ 'ಪೆಂಟಗನ್' ಚಿತ್ರದಲ್ಲೂ ಪ್ರಮುಖ ಪಾತ್ರದಲ್ಲಿದ್ದರು. ಈಗ ನಿವೇದಿತಾ ಅವರು ಬಂಡವಾಳ ಹೂಡುತ್ತಿರುವ ಮೊದಲ ಚಿತ್ರಕ್ಕೆ ನಿರ್ದೇಶನ ಮಾಡುವ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಮತ್ತು ಹೀರೊ ಆಗಿ ಚಿತ್ರರಂಗದಲ್ಲಿ ಹೊಸ ಪಯಣ ಆರಂಭಿಸಿದ್ದಾರೆ.

ಚಿತ್ರಕ್ಕೆ ಜಯ್ ರಾಮ್ ಸಹನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಅಭಿಲಾಷ್ ಕಲ್ಲತ್ತಿ ಛಾಯಾಗ್ರಹಣ, ಚರಣ್ ರಾಜ್ ಸಂಗೀತ ನಿರ್ದೇಶನ ಹಾಗೂ ರಘು ನಿಡುವಳ್ಳಿ ಅವರ ಸಂಭಾಷಣೆ ಇದೆ. ■